### ಜನಸಾಮಾನ್ಯರ ಮನದಲ್ಲಿ ಲೋಕಸಭೆ ಪ್ರತಿನಿಧಿಸಲಿ ಎಂಬ ಹಾರೈಕೆ

# ಸೇವೆಯಲ್ಲಿ ಮಾದರಿಯಾದ ಅನಂತ ಮೂರ್ತಿ

**ಶಿರಸಿ:** ಸಂಕಷ್ಟದಲ್ಲಿರುವ ಜನರಿಗೆ ಸ್ವಯಂ ಪ್ರೇರಿತವಾಗಿ ಸಹಾಯ ಮಾಡುತ್ತಾ, ನೊಂದವರ ಧ್ವನಿಯಾಗಿ, ಸಮಾಜ ಸೇವೆ ಮೂಲಕ ಗಮನ ಸೆಳೆಯುತ್ತಿರುವ ಶಿರಸಿಯ ಬ್ಯಾಗದ್ದೆಯ ಅನಂತಮೂರ್ತಿ ಹೆಗಡೆ ಚಾರಿಟೆಬಲ್ ಟ್ರಸ್ಟ್‌ನ ಸಂಸ್ಥಾಪಕ ಅನಂತಮೂರ್ತಿ ಹೆಗಡೆ, ಹಲವು ಜನಪರ ಕಾರ್ಯ ಮಾಡುವ ಮೂಲಕ ಜನಮಾನಸದಲ್ಲಿ ನೆಲೆಯೂರಿದ್ದಾರೆ. ಬಡವರ ಪ್ರತಿಧ್ವನಿಯಾಗಿ ಗುರುತಿಸಿಕೊಂಡ ಅನಂತಮೂರ್ತಿ, ರಾಜಕೀಯ ಕ್ಷೇತ್ರಕ್ಕೂ ಬರಬೇಕು ಎನ್ನುವ ಕೂಗು ಬಲವಾಗಿ ಕೇಳಿಬರುತ್ತಿದೆ.

ಈಗಾಗಲೇ ಹತ್ತು ಹಲವು ಸಾಮಾಜಿಕ ಕಾರ್ಯಗಳಿಂದ ಹೆಸರುವಾಗಿಯಾಗಿದ್ದು, ಆರ್ಥಿಕ ಸಂಕಷ್ಟದಲ್ಲಿರುವ ರಿಕ್ಷಾ ಚಾಲಕರಿಗೆ ನೆರವು, ಆಯ್ದ ಶಾಲೆ, ಆಸ್ಪತ್ರೆ, ಬಸ್ ನಿಲ್ದಾಣಗಳಲ್ಲಿ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶುದ್ಧ ನೀರಿನ ಘಟಕ ಸ್ಥಾಪನೆ ಮಾಡಿದ್ದಲ್ಲದೇ, ದಿವ್ಯಾಂಗ ಚೇತನ ಶಾಲೆಯ ಮಕ್ಕಳಿಗೆ ಅವಶ್ಯಕ ವಸ್ತುಗಳ ವಿತರಣೆ ಸೇರಿದಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೂ ತಮ್ಮ ಸಂಸ್ಥೆಯ ವತಿಯಿಂದ ಕೈಲಾದ ಸಹಾಯ ಮಾಡುವ ಮೂಲಕ ಮನೆ ಮಾತಾಗಿದ್ದಾರೆ. ಟ್ರಸ್ಟ್ ಮೂಲಕ ಅನಂತಮೂರ್ತಿ ಅವರ ಕಾರ್ಯವನ್ನು ಹಲವು ಗಣ್ಯರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಬಡ ಕುಟುಂಬದಿಂದ ಬಂದ ಅನಂತಮೂರ್ತಿ ತಮ್ಮ ಕಾರ್ಯ ವೈಖರಿಯಿಂದಲೇ ಜನಾನುರಾಗಿಯಾಗಿದ್ದಾರೆ.

**ಸಮಾಜಕ್ಕೆ ಕೊಡುಗೆ ನೀಡುವ ತುಡಿತ:** ಕಾರ್ಮಿಕ ವರ್ಗದವರ ಏಳಿಗೆಗೆ ಶಿಕ್ಷಣಕ್ಕಾಗಿ ಒತ್ತು ಮತ್ತು ಪ್ರೋತ್ಸಾಹ ನೀಡುವುದೇ ಅನಂತ ಮೂರ್ತಿ ಟ್ರಸ್ಟ್‌ನ ಮುಖ್ಯ ಉದ್ದೇಶ. ಈ ಮೂಲಕ ಸಾಮಾಜಿಕವಾಗಿ ತಮ್ಮದೇ ಛಾಪು ಮೂಡಿಸಿದ ಅನಂತ ಮೂರ್ತಿಹೆಗಡೆ ಅವರನ್ನು ರಾಜಕೀಯ ಕ್ಷೇತ್ರಕ್ಕೆ ಕಾಲಿಡಲು ಆಹ್ವಾನ ಬರುತ್ತಿದೆ. ಈಗಾಗಲೇ ತಮ್ಮದೇ ಒಂದು ಪ್ರಬಲ ಅಭಿಮಾನಿಗಳ ಪಡೆಯನ್ನೂ ಸೃಷ್ಟಿಸಿಕೊಂಡಿದ್ದು, ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಜನಸಾಮಾನ್ಯರ ಪ್ರತಿನಿಧಿಯಾಗುದರಲ್ಲಿ ಎರಡು ಮಾತಿಲ್ಲ ಎನ್ನುತ್ತಾರೆ ಹಲವು ರಿಕ್ಷಾ ಚಾಲಕರು.







## ರಾಷ್ಟ್ರೀಯ ವಿಚಾರಧಾರೆ ಚಿಂತಕ

ಸಿದ್ದಗಂಗಾ ಶ್ರೀ, ಪುನಿತ್ ರಾಜಕುಮಾರ್ ಹೀಗೆ ಕೆಲ ಆದರ್ಶಗಳಿಂದ ಪ್ರೇರಣೆಯಾದ ಅನಂತಮೂರ್ತಿ ಹೆಗಡೆ, ತಾವು ಗಳಿಸಿದ ಸಂಪತ್ತಿನ ಒಂದು ಭಾಗವನ್ನು ಬಡವರಿಗಾಗಿ ನೀಡುವ ಮೂಲಕ ಕೊಡುಗೈ ದಾನಿಯಾಗಿ ಗುರುತಿಸಿಕೊಂಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಕಟ್ಟಾ ಅಭಿಮಾನಿಯಾಗಿದ್ದು, ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಶಾಸಕ ಅಶ್ವತನಾರಾಯಣ ಅವರ ಜೊತೆ ಕಳೆದ 10 ವರ್ಷಗಳಿಂದ ಸಾಮಾಜಿಕ ಕಾರ್ಯ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾರೆ. ದೇಹಿ ಎಂದು ಅವರಲ್ಲಿ ಹೋದವರಿಗೆ ಇಲ್ಲ ಎನ್ನುವ ಮಾತೇ ಇಲ್ಲದಂತೆ ಇರುವ ಅನಂತಮೂರ್ತಿ ಹೆಗಡೆ, ಬಡವರ ಆಶಾಕಿರಣವಾಗಿ ಹೊರಹೊಮ್ಮಿದ್ದಾರೆ. ದಾನ, ಧರ್ಮ ಸೇರಿದಂತೆ ಸಮಾಜಕ್ಕೆ ತಮ್ಮದೇ ಆದ ಹಲವು ಕೊಡುಗೆ ನೀಡಬೇಕು ಎನ್ನುವ ಚಿಂತನೆ ಹಾಗೂ ಪ್ರಭಲ ಹಿಂದುತ್ವವಾದಿಯಾಗಿ ದೇಶ ಮೊದಲು ಎಂಬ ರಾಷ್ಟ್ರೀಯ ವಿಚಾರ ಧಾರೆಯಲ್ಲಿ ಮುನ್ನಡೆಯುತ್ತಿದ್ದಾರೆ ಅನಂತ ಮೂರ್ತಿ ಹೆಗಡೆ. ದೇಶ ಸೇವೆಯೇ ಈಶ ಸೇವೆ ಎನ್ನುವ ನುಡಿಯನ್ನೇ ಪ್ರೇರಣೆಯಾಗಿಸಿಕೊಂಡು ಸಾಮಾಜಿಕ ಸೇವಾ ರಂಗಕ್ಕೆ ಇಳಿದಿದ್ದಾರೆ.

## ಜನಪರ ಕಾರ್ಯಗಳು

ಅನಂತಮೂರ್ತಿ ಚಾರಿಟೆಬಲ್ ಟ್ರಸ್ಟ್ ಮೂಲಕ ಎಲ್ಲ ತಾಲೂಕಿನ ರಿಕ್ಷಾ ಚಾಲಕರಿಗೆ ಸಮವಸ್ತ್ರ, ಪ್ರಿಂಟಿಂಗ್‌ವುಡ್ ವಿತರಣೆ, ಆಟೋ ರಿಕ್ಷಾ ಪಾಸಿಂಗ್ ಯೋಜನೆ, ಶಿರಸಿ ಪಂಡಿತ್ ಆಸ್ಪತ್ರೆಯಲ್ಲಿ, ಕುಮಟಾ ಬಸ್ ನಿಲ್ದಾಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ ಸ್ಥಾಪನೆ ಸೇರಿದಂತೆ ಹಲವು ಜನಪರ ಕಾರ್ಯಗಳು ಗಮನಸೆಳೆಯುತ್ತಿವೆ. ನಿವೃತ್ತ ಸ್ವಾತಂತ್ರ್ಯ ಹೋರಾಟಗಾರರಿಗೆ ಟ್ರಸ್ಟ್ ಮೂಲಕ ಗೌರವ , ಹಲವು ಶಿಕ್ಷಣ ಸಂಸ್ಥೆಗಳು, ಶಾಲಾ ಕಾಲೇಜುಗಳಿಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೊಡುಗೆಯಾಗಿ ನೀಡಿದ್ದಾರೆ.



## ಬಡವರ ಬಂಧು

ಶ್ರೀಮಂತಿಕೆ ಇದ್ದರೂ ಸರಳತೆಗೆ ಹೆಸರುವಾಸಿ ಅನಂತಮೂರ್ತಿ. ಉದ್ಯಮಿಯಾಗಿ ಗುರುತಿಸಿಕೊಂಡು ಉತ್ತುಂಗದ ಶಿಖರವೇರಿದ ಇವರು ಬೆಂಗಳೂರಿಗೆ ಹೋಗಿ ನೆಲೆಸಿದರೂ ಹುಟ್ಟೂರಿನ ಜನರಿಗಾಗಿ ಹಂಬಲಿಸುತ್ತಾ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಿದ್ದಾರೆ. ಈಗಾಗಲೇ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ರಿಕ್ಷಾ ಚಾಲಕರಿಗೆ ಸಮವಸ್ತ್ರ ಹಾಗೂ ರಿಕ್ಷಾ ಪ್ರಿಂಟಿಂಗ್ ಹುಡ್ ವಿರತಣೆ ಮಾಡಿದ್ದಾರೆ. ಆರ್ಥಿಕ ಕಷ್ಟದಲ್ಲಿರುವ ರಿಕ್ಷಾ ಚಾಲಕರಿಗೆ ಒಂದು ವರ್ಷದ ವಾಹನ ವಿಮೆಯನ್ನೂ ಮಾಡಿಸಿಕೊಟ್ಟಿದ್ದಾರೆ. ಇದೇ ಕಾರಣಕ್ಕೆ ಬಡವರ ಬಂದು, ಆಟೋ ರಕ್ಷಕ ಎನ್ನುವ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.



## ಪರಿಶ್ರಮದ ಕಥೆ

ಸರಳ ಸಜ್ಜನಿಕೆ ಮೂರ್ತಿಯಾಗಿರುವ ಅನಂತ, ವಿನಯತೆ, ಉದಾರತೆಯನ್ನು ಮೈಗೂಡಿಸಿಕೊಂಡು ಸದಾ ಹಸನ್ಮುಖಿಯಾದ ಇವರ ಬದುಕಿನ ಹಿಂದೆ ಪರಿಶ್ರಮದ ಕಥೆ ಇದೆ.

ಶಿರಸಿ ತಾಲೂಕಿನ ಬ್ಯಾಗದ್ದೆಯಲ್ಲಿ ಮಹಾಬಲೇಶ್ವರ ಹೆಗಡೆ ಹಾಗೂ ಶಾರದಾ ಹೆಗಡೆ ದಂಪತಿಯ ಎರಡನೇ ಮಗನಾಗಿ ಹುಟ್ಟಿದ ಅನಂತಮೂರ್ತಿ ಕಡುಬಡತನದಲ್ಲಿ ಬೆಳೆದರು. ಇವರ ತಂದೆ ಶ್ರೀ ಮಾರಿಕಾಂಬಾ ದೇವಸ್ಥಾನದಲ್ಲಿ ತಿಂಗಳಿಗೆ ಕೇವಲ 800 ರೂಗಳಿಗೆ ಅಡುಗೆ ಕೆಲಸ ಮಾಡಿ ಸಂಸಾರ ನಿಭಾಯಿಸುತ್ತಿದ್ದರು. ಪ್ರಾಥಮಿಕ ಪ್ರೌಢ ಶಿಕ್ಷಣ ಮುಗಿಸಿದ ಅನಂತಮೂರ್ತಿ ಅವರಿಗೆ ಅಂದಿನ ದಿನಗಳಲ್ಲಿ ಉನ್ನತ ಶಿಕ್ಷಣ ಪಡೆಯುವುದೂ ಕಷ್ಟವಾಗಿತ್ತು. ಆಗ ಸಂಸ್ಕೃತ ಪಾಠಶಾಲೆಗಳಲ್ಲಿ ಸಂಸ್ಕೃತ ಅಧ್ಯಯನ ಮುಗಿಸಿ ಬೆಂಗಳೂರು ಸೇರಿದರು. ನಂತರ ದೂರ ಶಿಕ್ಷಣದ ಮೂಲಕ ಬಿ.ಕಾಂ ಪದವಿ ಪಡೆದಿದ್ದಾರೆ. ಬೆಂಗಳೂರಿನಲ್ಲಿ ದೇವಸ್ಥಾನವೊಂದರಲ್ಲಿ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಾ ಉದ್ಯಮಿಯಾಗಿ ತೊಡಗಿಸಿಕೊಂಡು ಎತ್ತರಕ್ಕೆ ಬೆಳೆದರು. ಆರ್ಥಿಕವಾಗಿ ಸಬಲರಾದ ಅನಂತಮೂರ್ತಿ ಬಡವರಿಗೆ ಸಹಾಯ ಮಾಡುವ ಕಾಯಕದಲ್ಲಿ ತೊಡಗಿಕೊಂಡರು.

---

“ ಹಣ ಇರುವವರಲ್ಲಿ ದಾನ ಮಾಡುವ ಗುಣ ಇರುವುದಿಲ್ಲ. ಆದರೆ ತಮ್ಮ ಉದ್ಯಮದಲ್ಲಿ ಗಳಿಸಿದ ಹಣದಲ್ಲಿ ತಮ್ಮದೇ ಟ್ರಸ್ಟ್ ಸ್ಥಾಪಿಸಿಕೊಂಡು ಸಮಾಜಮುಖಿ ಕಾಯಕದಲ್ಲಿ ನಿರತರಾದ ಅನಂತ ಮೂರ್ತಿ ಹೆಗಡೆ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಇನ್ನೂ ಅಭಿವೃದ್ಧಿ ಸಾಧಿಸಲಿ. ಹೆಗಡೆ ಅವರ ಸಾಮಾಜಿಕ ಕಳಕಳಿ ಸಮಾಜಕ್ಕೆ ಮಾದರಿ.

■ **ಡಾ. ವೆಂಕಟೇಶ ನಾಯ್ಕ,** ಸ್ಕೊಡ್‌ವೆಸ್ ಕಾರ್ಯನಿರ್ವಾಹಕ ನಿರ್ದೇಶಕ

---

“ ಕೆಳ ಸ್ಥರದ ಜನರನ್ನೂ ಗುರುತಿಸಿ ಅವರೊಂದಿಗೆ ಬೆರೆತು ಕೆಲಸ ಮಾಡುವ ಅನಂತ ಮೂರ್ತಿ ಅವರ ಸರಳತೆಯ ಗುಣ ಅತ್ಯಂತ ಶ್ಲಾಘನೀಯ. ಇಂಥವರು ರಾಜಕೀಯಕ್ಕೆ ಬರಬೇಕು. ಜನರ ಧ್ವನಿಯಾಗಿ ಕೆಲಸ ಮಾಡುವಂತ ಜನರ ಮುಂದಿನ ಲೋಕಸಭೆ ಚುನಾವಣೆಗೆ ಸ್ಪರ್ಧಿಸಬೇಕು.

■ **ನಾಗೇಶ ಪಟಗಾರ,** ರಿಕ್ಷಾ ಚಾಲಕ

---

“ ಅನಂತಮೂರ್ತಿ ಹೆಗಡೆ ಅವರ ಸಮಾಜ ಸೇವೆ ನಿರಂತರವಾಗಿ ನಡೆಯಲಿ. ಇವರು ಮಾಡುತ್ತಿರುವ ನಿಸ್ವಾರ್ಥ ಸೇವೆಯನ್ನು ಎಲ್ಲರೂ ಸದಾ ನೆನಪಿಸಿಕೊಳ್ಳುವಂತಾಗಲಿ. ಅವರು ಮಾಡುವ ಎಲ್ಲ ಕಾರ್ಯಗಳು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

■ **ಶಿವರಾಮ ಹೆಬ್ಬಾರ್,** ಶಾಸಕರು ಯಲ್ಲಾಪುರ

---

“ ಭವಿಷ್ಯದ ಉದಯೋನ್ಮುಖ ನಾಯಕರಾಗಿ ಅನಂತಮೂರ್ತಿ ಹೆಗಡೆ ಹೊರಹೊಮ್ಮಿದ್ದಾರೆ. ರಾಜಕೀಯ ರಂಗಕ್ಕೆ ಇಂಥ ಉದಯೋನ್ಮುಖ ಸಮಾಜಮುಖಿ ಕಾಯಕ ಮಾಡುವ ನಾಯಕರ ಅಗತ್ಯತೆ ಇದೆ. ಬಡವರ ಬಗ್ಗೆ ಇರುವ ಕಾಳಜಿ, ಸೇವಾ ಮನೋಭಾವನೆ ಎಲ್ಲವೂ ನಾಯಕತ್ವ ಗುಣ ತೋರಿಸುತ್ತದೆ. ಅವರ ಭವಿಷ್ಯದ ರಾಜಕೀಯ ಯಶಸ್ವಿಯಾಗಲಿ.

■ **ಪ್ರಮೋದ ಹೆಗಡೆ,** ಉಪಾಧ್ಯಕ್ಷರು ಪಂಚಾಯತ್ ರಾಜ್ ವಿಕೇಂದ್ರೀಕರಣ ಯೋಜನಾ ಸಮಿತಿ

---

“ ಬಡವರ ಕಷ್ಟಗಳಿಗೆ ನೆರವಾಗುವ ಹೃದಯ ಹೊಂದಿರುವ ಅನಂತಮೂರ್ತಿ ಹೆಗಡೆ ಅವರ ಕೊಡುಗೆ ಸಮಾಜಕ್ಕೆ ಬೇಕಿದೆ. ಅವರ ಭವಿಷ್ಯದ ಸಾಮಾಜಿಕ ರಾಜಕೀಯ ಜೀವನ ಇನ್ನಷ್ಟು ಬೆಳವಣಿಗೆಯಾಗಲಿ.

■ **ದಿನಕರ ಶೆಟ್ಟಿ,** ಶಾಸಕ

---

“ ತ್ಯಾಗದ ಮನೋಭಾವನೇ ಎಲ್ಲರಲ್ಲಿಯೂ ಇರುವುದಿಲ್ಲ. ಉದ್ಯಮಿಯಾಗಿ ತಾವು ಗಳಿಸಿದ ಹಣದಲ್ಲಿ ಸಮಾಜಮುಖಿ ಕಾರ್ಯಕ್ಕೆ ವಿನಿಯೋಗಿಸುತ್ತಿರುವುದು ಎಲ್ಲರಿಗೆ ಮಾದರಿ. ಆಧ್ಯಾತ್ಮಿಕ ಕ್ಷೇತ್ರಗಳಿಗೆ ಬರುವ ಭಕ್ತರಿಗೆ ಶುದ್ಧ ಕುಡಿಯುವ ನೀರು ಸಿಗುವಂತೆ ಮಾಡಿರುವುದು ಸಂತೋಷದ ಸಂಗತಿ.

■ **ಭೀಮಣ್ಣ ನಾಯ್ಕ,** ಶಾಸಕ

---

“ ಭವಿಷ್ಯದಲ್ಲಿ ರಾಜಕೀಯ ರಂಗಕ್ಕೆ ಉದಯೋನ್ಮುಖ ನಾಯಕನ ಪ್ರವೇಶವಾಗಬೇಕಿದೆ. ಸಮಾಜದೊಂದಿಗಿನ ಬದ್ಧತೆ, ಸೇವಾ ಮನೋಭಾವನೆ ಅವರಲ್ಲಿ ಕಾಣುತ್ತಿದೆ. ಹೀಗಾಗಿ ಬರುವ ಲೋಕಸಭಾ ಚುನಾವಣೆಯಲ್ಲಿ ಅವನ್ನು ಸ್ಪರ್ಧೆ ಮಾಡುವಂತೆ ಒತ್ತಾಯಿಸಲಾಗುವುದು. ಸಮಾಜಪರ ಕೆಲಸ ಮಾಡುವ ಅವರು ಜನಪ್ರತಿನಿಧಿಯಾಗಿ ಜಿಲ್ಲೆಯ ಚಿತ್ರಣವೇ ಬದಲಾಗಲಿ.

■ **ಚಂದ್ರಹಾಸ ನಾಯ್ಕ,** ಆಟೋ ಚಾಲಕ ಮಾಲಕರ ಸಂಘದ ಸಂಘಟನಾ ಕಾರ್ಯದರ್ಶಿ